ಎಂದು ಮಾಡಿದ್ದಾರೆ ರೇಷ್ಮೆ ಇಂಡಸ್ಟ್ರಿಯಲ್ಲಿರುವುದರಿಂದ ವ್ಯವಸಾಯ ಕ್ಷೇತ್ರಕ್ಕೆ ದೊರೆಯುವಂತಹ ರಿಯಾಯಿತಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಇದು ಇಂಡಸ್ಟ್ರಿ ಜೊತೆ ಸೇರಿಕೊಂಡು ಬಿಟ್ಟಿದೆ. ರೇಷ್ಮೆ ಇಂಡಸ್ಟ್ರಿಗೆ ಸೇರಿಕೊಂಡಿದ್ದರೂ ಕೂಡ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಿ. ರಾಜೂಗೌಡ —ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ಮಾನ್ಯ ಸದಸ್ಯರು ಮೂರು ಸಾರಿ ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳಿದ್ದೀರಿ, ನಿಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

ರೇಷ್ಮೆ ವ್ಯವಸಾಯದ ಉನ್ನತಿಗಾಗಿ ಜಾಗದ ವಿಸ್ತೀರ್ಣ.

೧೦೮೭. ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರೇಷ್ಮೆ ವ್ಯವಸಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಈಗಾಗಲೇ ಇರುವ ರೇಷ್ಮೆ ವ್ಯವಸಾಯದ ವಿಸ್ತೀರ್ಣವೆಷ್ಟು.

ಆ) ೧೯೮೫-೮೬ನೇ ಸಾಲಿನಲ್ಲಿ ಹೆಚ್ಚಿಸಿರುವ ವ್ಯವಸಾಯದ ವಿಸ್ತೀರ್ಣವೆಷ್ಟು?

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ಖಾತೆಯ ರಾಜ್ಯ ಸಚಿವರು). –

ಅ) ೨೪೩ ಹೆಕ್ಟೇರುಗಳು ಅಥವಾ ೬೦೮ ಎಕರೆಗಳು.

ಆ) ೫೬ ಹೆಕ್ಟೇರುಗಳು ಅಥವಾ ೧೪೦ ಎಕರೆಗಳು.

ಶ್ರೀ ಬಿ. ಗುರುಪ್ರಸಾದ್.—ಇದರಲ್ಲಿ ಸರ್ಕಾರದ ಜಮೀನೆಷ್ಟು? ಸರ್ಕಾರೀ ಜಮೀನಿನಲ್ಲಿ ಹರಿಜನ ಗಿರಿಜನರಿಗೆ ಎಷ್ಟು ಜಮೀನು ಕೊಡಲಾಗಿದೆ ?

ಶ್ರೀ ವೈ. ಕೆ. ರಾಮಯ್ಯ.—ಸರ್ಕಾರೀ ಜಮೀನು ಎಷ್ಟಿದೆ ಎನ್ನುವ ಅಂಕಿಅಂಶಗಳು ಇಲ್ಲ. ಸೋಲೂರು ಗ್ರಾಮದಲ್ಲಿ ಒಂದು ಸರ್ಕಾರೀ ಫಾರಂ ಇದೆ. ಅದನ್ನು ಬಿಟ್ಟರೆ ಉಳಿದದ್ದು ಖಾಸಗೀಯವರ ಹಿಡುವಳಿಗೆ ಸೇರಿದ್ದುದು.

ಕಾರವಾರದಲ್ಲಿ ಕೈಗಾರಿಕಾ ಮಳಿಗೆಗಳನ್ನು ನಿರ್ಮಿಸುವ ಬಗ್ಗೆ.

೧೦೭೬. ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ) —ಈ ಕೆಳಕಂಡ ಪ್ರಶ್ನೆಗಳಿಗೆ ಸಣ್ಣ ಪ್ರಮಾಣದ ಹಾಗೂ ಕೈಗಾರಿಕಾ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಕಾರವಾರದಲ್ಲಿ ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸಲು ಸರ್ಕಾರವು ನಿರ್ಧರಿಸಿದೆಯೇ) ಹಾಗಿದ್ದಲ್ಲಿ ಇದಕ್ಕಾಗಿ ನಿರ್ದಿಷ್ಟಪಡಿಸಿದ ಸ್ಥಳ ಯಾವುದು (ಸರ್ವೆ. ನಂ. ಮತ್ತು ಕ್ಷೇತ್ರದ ವಿವರ ಕೊಡಿ;

ಆ) ಈ ಜಮೀನು ಸರ್ಕಾರದ ಒಡೆತನದ್ದೂ ಅಥವಾ ಖಾಸಗಿಯವರಿಗೆ ಸಂಬಂಧಪಟ್ಟಿದ್ದೆ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯದ ಸಣ್ಣ ಕೈಗಾರಿಕಾ ಅಭಿವೃದ್ಧಿ ಮಂಡಳಿಯವರು ಕಾರವಾರ ತಾಲ್ಲೂಕಿನ ಶಿರವಾಡ ಗ್ರಾಮದ ಸ.ನಂ. ೯, ೧೫, ೧೮, ರಿಂದ ೨೦ ಮತ್ತು ೨೨ರಲ್ಲಿ ೨೦ ಎಕರೆ ಜಮೀನನ್ನು ಕೈಗಾರಿಕಾ ಮಳಿಗೆಗಳನ್ನು ಕಟ್ಟಲು ಸ್ವಾಧೀನಪಡಿಸಿಕೊಳ್ಳಲಿದ್ದಾರೆ.

ಆ) ಖಾಸಗಿ.

ಶ್ರೀ ಪ್ರಭಾಕರ್ ಎಸ್. ರಾಣೆ.—ಸ್ವಾಮಿ, ಕಾರವಾರ ತಾಲ್ಲೂಕು ಶಿರವಾಡ ಗ್ರಾಮದಲ್ಲಿ ಸರ್ವೆ ನಂ. ೯–೧೫–೧೮–೨೦–೨೨ರಲ್ಲಿ ಸುಮಾರು ೨೦ ಎಕರೆಯಷ್ಟು ಜಮೀನಿನಲ್ಲಿ ಕೈಗಾರಿಕಾ ಮಳಿಗೆಗಳನ್ನು ಕಟ್ಟಲಿಕ್ಕೆ ಸ್ವಾಧೀನಪಡಿಸಿಕೊಳ್ಳಲಾಗಿದೆಯೆಂದು ಹೇಳಿದ್ದಾರೆ. ಆದೇರೀತಿ ಮಾದಾಳಿ ಗ್ರಾಮದಲ್ಲಿಯೂ ಕೂಡ ಕೈಗಾರಿಕಾ ಮಳಿಗೆಗಳನ್ನು ಕಟ್ಟಲು ಜಮೀನು ಸ್ವಾಧೀನಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹೀಗೆ ಸ್ವಾಧೀನ ಪಡಿಸಿಕೊಂಡಂಥ ಜಮೀನು ಬಹುಪಾಲು ಸಣ್ಣ ರೈತರಿಗೆ ಸೇರಿದ್ದು, ಬ್ಯಾಂಕುಗಳಿಂದ ಸಾಲ ಪಡೆದು, ಬಾವಿಗಳನ್ನು ತೋಡಿ, ತೋಟಗಳನ್ನು